ಅಧ್ಯಕ್ಷರು : ನೀವು ಒಂದು ಕೆಲಸ ಮಾಡಿ. ಇಲಾಖೆಗಳ ಬೇಡಿಕೆ ಮೇಲೆ ಮಾತನಾಡುವಾಗ ನೀವೆಲ್ಲರೂ ಒಕ್ಕೊರಲಿನಿಂದ ಅವರ ಇಲಾಖೆಗೆ ಇನ್ನೂ ಹೆಚ್ಚಿನ ಹಣ ಕೊಡಬೇಕು ಎಂದು ಸರ್ಕಾರದ ಮೇಲೆ ಒತ್ತಡ ತನ್ನಿ.

ವಿಟ್ಲ ಪಟ್ಟಣಕ್ಕೆ ಒಂದು ರಿಂಗ್ ರಸ್ತೆ

445 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂಟ್ವಾಳ ತಾಲ್ಲೂಕಿನ ವಿಟ್ಲ ಪೇಟೆಗೆ ಒಂದು ರಿಂಗ್ ರಸ್ತೆ ಯ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಕೈಕೊಳ್ಳಲಿರುವ ಕ್ರಮಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಸದರೀ ಬೈಪಾಸ್ ರಸ್ತೆ 2.40 ಕಿಮೀ. ಉದ್ದವಿದ್ದು, ಇದರ ನಿರ್ಮಾಣ ಮತ್ತು ಭೂಸ್ವಾಧೀನ ಸೇರಿ ಒಟ್ಟು ಮೊತ್ತ ಪ್ರಸಕ್ತ ಸಾಲಿನ ದರದಂತೆ 120.00 ಲಕ್ಷ ರೂ. ಆಗುತ್ತದೆ. ಕೆಲಸದ ಆಧ್ಯತೆ ಮತ್ತು ಅನುದಾನದ ಲಭ್ಯತೆಯಂತೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಬಂಟ್ವಾಳ ತಾಲ್ಲೂಕಿನ ವಿಟ್ಲ ಪೇಟೆಗೆ ಒಂದು ರಿಂಗ್ ರಸ್ತೆ ಅವಶ್ಯಕತೆ ಇರುವ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ. ಅದರ ಬಗ್ಗೆ ನೀವು ಗಮನ ಕೊಟ್ಟಿದ್ದೀರಿ ಎಂಬುದು ನೀವು ಕೊಟ್ಟಿರುವ ಉತ್ತರ ನೋಡಿದಾಗ ನನಗೆ ಅರ್ಥವಾಗುತ್ತದೆ, ಅದಕ್ಕೆ ಧನ್ಯವಾದಗಳು. ಆದರೆ ಅಲ್ಲಿ ಅದು ಒಂದು ಸಣ್ಣ ಪೇಟೆಯಾಗಿದ್ದು ಜನಭರಿತವಾಗಿದೆ ಮತ್ತು ವಾಹನ ಸಂಚಾರ ಕೂಡ ಜಾಸ್ತಿಯಾಗುತ್ತಿದೆ. ಅದು ಅಂತರ್ ರಾಜ್ಯಕ್ಕೆ ಸಂಬಂಧಪಟ್ಟಂಥ ಒಂದು ರಸ್ತೆ. ಆ ಪೇಟೆಗೆ ನಾಲ್ಕು ಕಡೆಯಿಂದ ಕೂಡ ಪ್ರಮುಖ ರಸ್ತೆಗಳು ಬಂದು ಸೇರುತ್ತವೆ. ಅವುಗಳಿಂದರೆ ಪುತ್ತೂರು, ಕೇರಳ ಮತ್ತು ಮಂಗಳೂರು. ಇಲ್ಲಿ ಆದಷ್ಟು ಬೇಗ ರಿಂಗ್ ರಸ್ತೆಯಾಗದಿದ್ದರೆ ಇನ್ನು ಒಂದೆರಡು ವರ್ಷಗಳಲ್ಲಿ ಅಲ್ಲಿ ಸಂಚಾರ ಮಾಡುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಪ್ರಥಮದರ್ಜೆ ಕಾಲೇಜಿದೆ ಮತ್ತು ಜ್ಯೂನಿಯರ್ ಕಾಲೇಜ್ ಕೂಡ ಇದೆ. ಆದುದರಿಂದ ಅಲ್ಲಿ ಅನುದಾನ ಲಭ್ಯವಾದಾಗ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಅನುದಾನ ಯಾರು ಕೊಡುತ್ತಾರೆ? ಆದುದರಿಂದ ಅದರ ಅವಶ್ಯಕತೆಯನ್ನು ತಿಳಿದುಕೊಂಡು ಇದೇ ವರ್ಷದಲ್ಲಿ ಹಣ ಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಸಭಾಧ್ಯಕ್ಷರೆ, ಈ ಸುಳ್ಯ ಪೇಟೆಯಿಂದ ಹಾದು ಹೋಗುವ ರಸ್ತೆ ಮೈಸೂರು, ಬಂಟ್ವಾಳ ರಾಜ್ಯ ಹೆದ್ದಾರಿಯಲ್ಲಿ ಎರಡೂ ಬದಿಗೆ ಕಟ್ಟಡಗಳಿರುವುದರಿಂದ ರಸ್ತೆ

ಅಭಿವೃದ್ಧಿ ಮಾಡುವುದು ಸಾಧ್ಯವಾಗುತ್ತಿಲ್ಲ. ಅದಕ್ಕಾಗಿ ಬೈಪಾಸ್ ರಸ್ತೆಯನ್ನು ಮಾಡಬೇಕೆಂಬ ಬೇಡಿಕೆಯನ್ನು ತಾವು ಇಟ್ಟಿದ್ದೀರಿ. ಈ ಬೈಪಾಸ್ ರಸ್ತೆ ಮಾಡುವ ಸಲುವಾಗಿ ಸುಮಾರು 30 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿರುವುದರಿಂದ, ಸುಮಾರು 4 ಕೋಟಿ ರೂಪಾಯಿಗಳಷ್ಟು ಹಣ ಇದಕ್ಕೆ ಬೇಕಾಗುತ್ತದೆ. ಇದನ್ನು ಹಣಕಾಸಿನ ಲಭ್ಯತೆಯ ಮೇಲೆ ಮಾಡಲಾಗುತ್ತದೆ. ಏಕೆಂದರೆ ಬಜೆಟ್‌ನಲ್ಲಿ ನಮಗೆ ಅವಕಾಶವಾಗಿರುವುದು ಕೇವಲ 50 ಕೋಟಿ ರೂಪಾಯಿಗಳು. ಇದು ರಸ್ತೆಗಾಗಿಯೇ ಬೇಕಾಗುತ್ತದೆ. ಹಣಕಾಸಿನ ನೆರವು ತೆಗೆದುಕೊಂಡು ಈ ವರ್ಷ ನಾವು ರಸ್ತೆಗಳನ್ನು ಮುಗಿಸಬೇಕಾಗಿದೆ. ರಸ್ತೆಗಳ ಕೆಲಸಕ್ಕೆ ನಾವು ಹಣವನ್ನು ವಿನಿಯೋಗ ಮಾಡುತ್ತಿದ್ದೇವೆ. ಹೊಸ ರಸ್ತೆಗಳಿಗಾಗಿ ನಾವು ಈ ವರ್ಷ ಯಾವುದೇ ಕಾಮಗಾರಿಗಳನ್ನು ತೆಗೆದುಕೊಂಡಿಲ್ಲ. ಅದಕ್ಕೆ ಹಣಕಾಸಿನ ಲಭ್ಯತೆ ಮೇಲೆ ಇದನ್ನು ಗಮನದಲ್ಲಿಟ್ಟುಕೊಂಡು ಆದ್ಯತೆ ಮೇಲೆ ಕೆಲಸ ಮಾಡುತ್ತೇವೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಬೈಪಾಸ್ ರಸ್ತೆಯ ಅವಶ್ಯಕತೆ ಇದೆ ಎಂದು ತಾವು ಉತ್ತರ ಕೊಟ್ಟಿದ್ದೀರಿ. ಅವಶ್ಯಕತೆ ಇದೆ ಎಂದ ಮೇಲೆ ಅದನ್ನು ಪ್ರಾರಂಭ ಮಾಡಬೇಕಲ್ಲವೆ? ಇನ್ನು ಒಂದೆರಡು ವರ್ಷ ಹೋದರೆ ಅಲ್ಲಿ ಸಂಚಾರ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ನಾನು ಹೇಳುವುದೇನೆಂದರೆ ಕೊನೆಪಕ್ಷ ಈ ವರ್ಷ ಸ್ವಲ್ಪ ಹಣ ಇಟ್ಟು ಈ ಕೆಲಸ ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಸಿ.ಎಂ. ಉದಾಸಿ : ಅದನ್ನು ನಾವು ಸೌಜನ್ಯದಿಂದ ಗಮನದಲ್ಲಿಟ್ಟುಕೊಂಡು ಈ ಭೂಮಿ ಸ್ವಾಧೀನಪಡಿಸಿಕೊಳ್ಳುವ ಕಾರ್ಯಕ್ರಮವನ್ನು ನೆರವೇರಿಸುವ ಸಲುವಾಗಿ, ನಾನು ಇಲಾಖೆಯಲ್ಲಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು : ಶ್ರೀ ಜಯರಾಮಶೆಟ್ಟಿಯವರೆ ತಮ್ಮ ಪ್ರಶ್ನೆಯನ್ನು ಇನ್ನೊಂದು ದಿವಸ ತೆಗೆದುಕೊಳ್ಳೋಣ.

ಶ್ರೀ ಕೆ. ಜಯರಾಮಶೆಟ್ಟಿ : ನಾನು ಸೋಮವಾರ ಗಮನ ಸೆಳೆಯುವ ಸೂಚನೆಯಲ್ಲಿ ಪ್ರಶ್ನೆ ಕೇಳಿದ್ದೆ. ಅದ್ಕಕೆ ಅವಕಾಶ ಕೊಡುತ್ತೇನೆ ಎಂದು ಹೇಳಿ ತಾವು ಅವಕಾಶ ಕೊಟ್ಟಿರಲಿಲ್ಲ.

ಅಧ್ಯಕ್ಷರು : ಇಲ್ಲ ಇವೊತ್ತು ಮಂತ್ರಿಗಳು ಮೊದಲೆ ನನಗೆ ಸೂಚನೆ ಕೊಟ್ಟಿದ್ದಾರೆ. ಆಮೇಲೆ ತೆಗೆದುಕೊಳ್ಳೋಣ.

ರಾಜ್ಯದಲ್ಲಿ ಹೊಸದಾಗಿ ಮಂಜೂರಾದ ಬಯಲು ರಂಗ ಮಂದಿರಗಳು

448 - Sri. U.R. Sabhapathi (Udupi) : Will the Hon'ble Minister of State for Tourism, Kannada & Culture be pleased to state ?

a) *How many Open Air Theatres have been Sanctioned during 1997-98 in the State? (Furnish Districtwise information)*

b) *How much amount has been earmarked for this purpose?*